# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

ಸಂಖ್ಯೆ: ಕೆಇಪಿಜಿಟಿ/ಪಿ10/2011-12/Cys 3

6 ನೇ ಮಹಡಿ,
ಕಾವೇರಿ ಭವನ,
ಬೆಂಗಳೂರು-560 009.
ದಿನಾಂಕ: 08-12-2011.

ಗೆ,

1. ಎಲ್ಲಾ ಕಾರ್ಯ ನಿರ್ವಾಹಕ ಇಂಜಿನಿಯರ್/ಎಲ್ಲಾ ಲೆಕ್ಕಾಧಿಕಾರಿಗಳು,
   ಕಾರ್ಯ ಮತ್ತು ಪಾಲನಾ ವಿಭಾಗ,
   ಬೆವಿಕಂ/ಮವಿಸಕಂ/ಹುವಿಸಕಂ/ಗುವಿಸಕಂ/ಚಾವಿಸಕಂ.
2. ಎಲ್ಲಾ ಲೆಕ್ಕಾಧಿಕಾರಿಗಳು,
   ಆಂತರಿಕ ಪರಿಶೋಧನೆ
   ಬೆವಿಕಂ/ಮವಿಸಕಂ/ಹುವಿಸಕಂ/ಗುವಿಸಕಂ/ಚಾವಿಸಕಂ.

ಮಾನ್ಯರೇ,

**ವಿಷಯ:** ಪ್ರತಿ ತಿಂಗಳೂ ಪಿಂಚಣಿ ಹಾಗೂ ಕುಟುಂಬ ಪಿಂಚಣಿ ಪಾವತಿಸಲು ಸಲ್ಲಿಸುತ್ತಿರುವ ನಿಧಿ ಕೋರಿಕೆ ಹಾಗೂ ಬ್ಯಾಂಕ್ ಸಮನ್ವಯ ತಖ್ತೆಯಲ್ಲಿನ ನ್ಯೂನ್ಯತೆಗಳ ಬಗ್ಗೆ.

* * * * *

ಪ್ರತಿ ತಿಂಗಳು ಪಿಂಚಣಿ ಹಾಗೂ ಕುಟುಂಬ ಪಿಂಚಣಿ ಪಾವತಿಸುವ ಸಲುವಾಗಿ ಪಿಂಚಣಿ ಬಟವಾಡೆ ಮಾಡುತ್ತಿರುವ ಲೆಕ್ಕ ಘಟಕಗಳು ನಿಧಿ ಕೋರಿಕೆಯನ್ನು ಪಿಂಚಣಿ ಮತ್ತು ಉಪದಾನ ಟ್ರಸ್ಟ್ ಗೆ ಸಲ್ಲಿಸುತ್ತಿದ್ದು, ಅವುಗಳನ್ನು ಪರಿಶೀಲಿಸಿದಾಗ ಹಲವಾರು ನ್ಯೂನ್ಯತೆಗಳು ಕಂಡು ಬಂದಿರುತ್ತವೆ. ಅವುಗಳಲ್ಲಿ ಕೆಲವನ್ನು ಈ ಕೆಳಗಿನಂತೆ ಪಟ್ಟಿ ಮಾಡಿ ಮಾರ್ಗಸೂಚಿ ನೀಡಲಾಗಿದೆ.

**<u>ನಿಧಿ ಕೋರಿಕೆ ನಮೂನೆ-1:</u>**

1. ನಿಧಿ ಕೋರಿಕೆ ನಮೂನೆ-1 ರ ಕಾಲಂ(2) ರಲ್ಲಿ ಹಿಂದಿನ ತಿಂಗಳಿನ ಆರಂಭ ಶಿಲ್ಕು ಎಂದರೆ ಯಾವ ತಿಂಗಳಿನ ನಿಧಿ ಕೋರಿಕೆ ಸಲ್ಲಿಸುತ್ತಿರುವಿರೋ ಆ ತಿಂಗಳಿನ ಹಿಂದಿನ ತಿಂಗಳ ನಗದು ಪುಸ್ತಕದ ಆರಂಭ ಶಿಲ್ಕನ್ನು ನಮೂದಿಸತಕ್ಕದ್ದು.

2. ನಿಧಿ ಕೋರಿಕೆ ನಮೂನೆ-1 ರ ಕಾಲಂ(3) ರಲ್ಲಿ ಹಿಂದಿನ ತಿಂಗಳು ಪಿಂಚಣಿ ಹಾಗೂ ಕುಟುಂಬ ಪಿಂಚಣಿ ಪಾವತಿಗಾಗಿ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನಿಂದ ಪಡೆದ ನಿಧಿಯ ಮೊತ್ತವನ್ನು ಮಾತ್ರ ಬರೆಯಬೇಕು. ಇದಲ್ಲದೆ ಬೇರೆ ಯಾವುದಾದರೂ ಮೊತ್ತವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಿದ್ದರೆ ಅದನ್ನು ಪ್ರತ್ಯೇಕವಾಗಿ ಬರೆಯತಕ್ಕದ್ದು.

3. ನಿಧಿ ಕೋರಿಕೆ ನಮೂನೆ-1 ರ ಕಾಲಂ (4) ರಲ್ಲಿ ಹಿಂದಿನ ತಿಂಗಳು ನಿಖರವಾಗಿ ಪಾವತಿಯಾಗಿರುವ ಪಿಂಚಣಿ ಹಾಗೂ ಕುಟುಂಬ ಪಿಂಚಣಿಯ ಮೊತ್ತವನ್ನು ನಮೂದಿಸಬೇಕು.(ಇವಕ್ಕೆ ಚೆಕ್ಕು-ವಾರು ವಿವರಗಳನ್ನು ಒದಗಿಸುವ ಅಗತ್ಯವಿಲ್ಲ).

4. ನಿಧಿ ಕೋರಿಕೆ ನಮೂನೆ-1ರ ಕಾಲಂ(5) ರಲ್ಲಿ ಹಿಂದಿನ ತಿಂಗಳು ನಗದು ಪುಸ್ತಕದ ಅಂತಿಮ ಶಿಲ್ಕನ್ನು ನಮೂದಿಸತಕ್ಕದ್ದು. ಸದರಿ ಮೊತ್ತವು ಆ ತಿಂಗಳಿನ ಬ್ಯಾಂಕ್ ಸಮನ್ವಯ ತಖ್ತೆಯಲ್ಲಿನ ನಗದು ಪುಸ್ತಕದ ಪ್ರಕಾರ ತೋರಿಸಿರುವ ಅಂತಿಮ ಶಿಲ್ಕಿಗೆ ಹೊಂದಾಣಿಕೆಯಾಗಬೇಕು.

ನಿಧಿ ಕೋರಿಕೆ ನಮೂನೆ-2:

5. ನಿಧಿ ಕೋರಿಕೆ ನಮೂನೆ(2) ರಲ್ಲಿ ಕೇವಲ ಯಾವ ತಿಂಗಳಿನ ಪಿಂಚಣಿ ಹಾಗೂ ಕುಟುಂಬ ಪಿಂಚಣಿಯನ್ನು ಪಾವತಿಸಬೇಕಾಗಿದೆಯೋ ಆ ತಿಂಗಳಿನ ಕ್ಲೇಮು ಮಾತ್ರ ತೋರಿಸಬೇಕು. ಯಾವುದೇ ಬಾಕಿ ಮೊತ್ತವನ್ನು ಇದರಲ್ಲಿ ನಮೂದಿಸತಕ್ಕದ್ದಲ್ಲ.
6. ನಮೂನೆ-2 ರಲ್ಲಿ ದೃಢೀಕರಿಸಬೇಕಾದ ಎಲ್ಲಾ ವಿವರಗಳನ್ನು ಕಡ್ಡಾಯವಾಗಿ ಭರ್ತಿ ಮಾಡಬೇಕು ಹಾಗೂ ಕ್ರಮ ಸಂಖ್ಯೆ(4)ರಲ್ಲಿ ನಗದು ಪುಸ್ತಕದ ಅಂತಿಮ ಶಿಲ್ಕನ್ನು ನಮೂದಿಸತಕ್ಕದ್ದು.

ಬ್ಯಾಂಕ್ ಸಮನ್ವಯ ತಖ್ತೆ:

7. ಯಾವ ತಿಂಗಳಿನ ನಿಧಿ ಕೋರಿಕೆಯನ್ನು ಸಲ್ಲಿಸಲಾಗಿದೆಯೋ ಆ ತಿಂಗಳಿನ ಹಿಂದಿನ ತಿಂಗಳಿನ ಬ್ಯಾಂಕ್ ಸಮನ್ವಯ ತಖ್ತೆಯನ್ನು ನಿಧಿ ಕೋರಿಕೆಯ ಜೊತೆಗೆ ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
8. ಬ್ಯಾಂಕ್ ಸಮನ್ವಯ ತಖ್ತೆಯ ಆರಂಭ ಶಿಲ್ಕು, ನಮೂನೆ-1 ರ ಕಾಲಂ(1) ಕ್ಕೆ ಹೊಂದಾಣಿಕೆ ಮಾಡತಕ್ಕದ್ದು.
9. ಬ್ಯಾಂಕ್ ಸಮನ್ವಯ ತಖ್ತೆಯ ಅಂತಿಮ ಶಿಲ್ಕು ನಮೂನೆ-1 ರ ಕಾಲಂ(5) ರಲ್ಲಿರುವ ಮೊತ್ತಕ್ಕೆ ಹೊಂದಾಣಿಕೆಯಾಗಬೇಕು.
10. ಬ್ಯಾಂಕ್ ಸಮನ್ವಯ ತಖ್ತೆಯಲ್ಲಿ ತೋರಿಸಿರುವಂತೆ ಮಾಸಾಂತ್ಯಕ್ಕೆ ನಗದಾಗದೇ ಇರುವ (Un realised) ಚೆಕ್ಕಿನ ವಿವರಗಳನ್ನು ತಪ್ಪದೇ ನಿಧಿ ಕೋರಿಕೆಯ ಜೊತೆಗೆ ಒದಗಿಸತಕ್ಕದ್ದು
11. ಪಿಂಚಣಿ ಹಾಗೂ ಕುಟುಂಬ ಪಿಂಚಣಿ ಪಾವತಿಗಾಗಿ ತೆರೆಯಲಾಗಿರುವ ಬ್ಯಾಂಕ್ ಖಾತೆಯು ಕಡ್ಡಾಯವಾಗಿ ಉಳಿತಾಯ ಖಾತೆಯಾಗಿರತಕ್ಕದ್ದು ಹಾಗೂ ಸದರಿ ಖಾತೆಯ ಕನಿಷ್ಠ ಮೊತ್ತ ರೂ.1000/- (ಒಂದು ಸಾವಿರ ರೂಪಾಯಿ) ಮಾತ್ರ ಇರುವಂತೆ ನೋಡಿಕೊಳ್ಳಬೇಕು.
12. ನಿಧಿ ಕೋರಿಕೆ ನಮೂನೆ(2) ಹಾಗೂ ಬ್ಯಾಂಕ್ ಸಮನ್ವಯ ತಖ್ತೆಯು ಲೆಕ್ಕಾಧಿಕಾರಿ(ಆಂ. ಪ) ಇವರಿಂದ ಪರಿಶೀಲಿಸಿ ದೃಢೀಕರಿಸತಕ್ಕದ್ದು.

ಮೇಲಿನ ಎಲ್ಲಾ ಅಂಶಗಳನ್ನು ಸರಿಯಾಗಿ ಪರಿಶೀಲಿಸಿದ ನಂತರವೇ ನಿಧಿ ಕೋರಿಕೆಯನ್ನು **ಪ್ರತಿ ತಿಂಗಳು 20 ನೇ ತಾರೀಖಿನೊಳಗಾಗಿ** ಈ ಕಚೇರಿಯನ್ನು ತಲುಪುವಂತೆ ಸಲ್ಲಿಸಲು ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

8.12.11

ನಿಯಂತ್ರಣಾಧಿಕಾರಿ(ಪಿಂ & ಉ ಟ್ರಸ್ಟ್)

ಪ್ರತಿಗಳು:

1. ಆರ್ಥಿಕ ಸಲಹೆಗಾರರು (ಆರ್ಥಿಕ ಮತ್ತು ಸಂಪನ್ಮೂಲ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಹ ಮತ್ತು ವಾ), ಬೆವಿಕಂ, ಬೆಂಗಳೂರು.
3. ಆರ್ಥಿಕ ಸಲಹೆಗಾರರು ಮವಿಸಕಂ/ಹುವಿಸಕಂ/ಗುವಿಸಕಂ/ಚಾವಿಸಕಂ
   ಇವರ ಮಾಹಿತಿಗಾಗಿ ಹಾಗೂ ಈ ಸುತ್ತೋಲೆಯಲ್ಲಿನ ಅಂಶಗಳನ್ನು ಪಾಲಿಸುವಂತೆ ತಮ್ಮ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಬಂಧಪಟ್ಟ ಎಲ್ಲಾ ಲೆಕ್ಕಾಧಿಕಾರಿಗಳಿಗೆ ಸೂಚಿಸಲು ಕೋರಲಾಗಿದೆ.
4. ಲೆಕ್ಕಾಧಿಕಾರಿ, ಎಂ.ಆರ್.ಎಸ್., ಕಪಿಪ್ರನಿನಿ, ಶಿವಮೊಗ್ಗ.
5. ಲೆಕ್ಕಾಧಿಕಾರಿ,(ನ & ಲೆ), ಕಪಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
6. ಉಲೆಸಿ/ಲೆ/ಸಲೆ/ಹಿಸ-2, ಪಿಂಚಣಿ ಮತ್ತು ಉಪದಾನ ಟ್ರಸ್ಟ್.
   ಮುಖ್ಯ ಕಡತ/ಕಚೇರಿ ಕಡತ.

____________________ಕಂಪನಿ ನಿಯಮಿತ

_______________

_______________

ಇವರ ಕಚೇರಿ

ಸಂಖ್ಯೆ:

ಲಗತ್ತು: ಬ್ಯಾಂಕ್ ಸಮನ್ವಯ ಪಟ್ಟಿ (ಎಲ್ಲಾ ವಿವರಗಳೊಂದಿಗೆ)

ಗೆ,

ನಿಯಂತ್ರಣಾಧಿಕಾರಿ ಮತ್ತು ವ್ಯವಸ್ಥಾಪಕ ಟ್ರಸ್ಟಿ,

ಪಿಂಚಣಿ ಮತ್ತು ಉಪದಾನಗಳ ಟ್ರಸ್ಟ್,

ಕವಿಪ್ರನಿನಿ, ಕಾವೇರಿ ಭವನ, 6 ನೇ ಮಹಡಿ,

ಬೆಂಗಳೂರು–560009.

ನಮೂನೆ – 1

____________________ತಿಂಗಳಿನ ಪಿಂಚಣಿ ಮತ್ತು ಕುಟುಂಬ ಪಿಂಚಣಿ ಪಾವತಿಗಾಗಿ ನಿಧಿ ಕೋರಿಕೆ.

(ಅಂಕಿಗಳು: ರೂಪಾಯಿಗಳಲ್ಲಿ)

| ನಗದು ಪುಸ್ತಕದಲ್ಲಿರುವಂತೆ ಹಿಂದಿನ ತಿಂಗಳಿನ ಆರಂಭ ಶಿಲ್ಕು | ಪಿಂಚಣಿ ಮತ್ತು ಕುಟುಂಬ ಪಿಂಚಣಿ ಪಾವತಿಗಾಗಿ ಹಿಂದಿನ ತಿಂಗಳು ಲಭ್ಯವಾದ ನಿಧಿ | | ಲಭ್ಯವಾದ ಒಟ್ಟು ನಿಧಿ (1+2+3) | ಹಿಂದಿನ ತಿಂಗಳಿನಲ್ಲಿ ನಿಖರವಾಗಿ ಪಾವತಿಯಾಗಿರುವ ಪಿಂಚಣಿ ಮತ್ತು ಕುಟುಂಬ ಪಿಂಚಣಿ | ನಗದು ಪುಸ್ತಕದಲ್ಲಿರುವಂತೆ ಅಂತಿಮ ಶಿಲ್ಕು (ಬಿ.ಆರ್.ಎಸ್. ನಲ್ಲಿರುವ ಮೊತ್ತಕ್ಕೆ ಹೊಂದಾಣಿಕೆಯಾಗಬೇಕು) | ಸದರಿ ತಿಂಗಳಿನಲ್ಲಿ ಪಿಂಚಣಿ ಮತ್ತು ಕುಟುಂಬ ಪಿಂಚಣಿ ಪಾವತಿಗಾಗಿ ಬೇಕಾಗಿರುವ ನಿವ್ವಳ ನಿಧಿ |
|---|---|---|---|---|---|---|
| | ಪಿಂ. ಮತ್ತು ಉ. ಟ್ರಸ್ಟ್ ನಿಂದ ಪಡೆದ ನಿಧಿ | ಬ್ಯಾಂಕ್ ಖಾತೆಗೆ ಜಮಾ ಮಾಡಿದ ಇತರೆ ಮೊತ್ತ(ವಿವರಗಳನ್ನು ಲಗತ್ತಿಸುವುದು) | | | | |
| 1 | 2 | 3 | 4 | 5 | 6 | 7 |
| | | | | | | |

| ಕ್ರಮ ಸಂಖ್ಯೆ | ವಿವರಗಳು | ಮೊತ್ತ (ರೂಪಾಯಿಗಳಲ್ಲಿ) |
|---|---|---|
| 1 | __________________ ತಿಂಗಳಿನ ಪಿಂಚಣಿ ಮತ್ತು ಕುಟುಂಬ ಪಿಂಚಣಿಯ ಬಿಲ್ಲುಗಳು<br>(ನಮೂನೆ –2 ರಲ್ಲಿ ವಿವರಗಳನ್ನು ಭರ್ತಿ ಮಾಡಿ ಆಂತರಿಕ ಲೆಕ್ಕಾಧಿಕಾರಿಯವರಿಂದ ಪರಿಶೀಲಿಸಲ್ಪಟ್ಟಿರಬೇಕು) | |
| 2 | ಪಿಂಚಣಿ ಮತ್ತು ಕುಟುಂಬ ಪಿಂಚಣಿಯ ಬಾಕಿ ಬಿಲ್ಲುಗಳು<br>(ನಮೂನೆ –3 ರಲ್ಲಿವಿವರಗಳನ್ನು ಭರ್ತಿ ಮಾಡಿ ಆಂತರಿಕ ಲೆಕ್ಕಾಧಿಕಾರಿಯವರಿಂದ ಪರಿಶೀಲಿಸಲ್ಪಟ್ಟಿರಬೇಕು) | |
| 3 | ಉಪ ವಿಭಾಗದಿಂದ ಪಿಂಚಣಿ /ಕುಟುಂಬ ಪಿಂಚಣಿ ಪಾವತಿಗಾಗಿ ಖರ್ಚು ಮಾಡಲಾದ ಡಿ.ಡಿ. ಕಮಿಶನ್<br>(ಎಸ್.ಬಿ.ಐ ಮತ್ತು ಎಸ್.ಬಿ.ಎಂ ಬ್ಯಾಂಕ್ ಗಳನ್ನು ಹೊರತು ಪಡಿಸಿ)<br>( ನಮೂನೆ –4 ರಲ್ಲಿ ವಿವರಗಳನ್ನು ಒದಗಿಸಬೇಕು) | |
| 4 | ತುಟ್ಟಿ ಭತ್ಯೆ ಬಾಕಿ (ಅವಧಿ: _____________ಇಂದ ______________ವರೆಗೆ)<br>(ನಮೂನೆ –5 ರಲ್ಲಿವಿವರಗಳನ್ನು ಭರ್ತಿ ಮಾಡಿ ಆಂತರಿಕ ಲೆಕ್ಕಾಧಿಕಾರಿಯವರಿಂದ ಪರಿಶೀಲಿಸಲ್ಪಟ್ಟಿರಬೇಕು) | |
| 5 | 80/85/90 ವರ್ಷ ಮೇಲ್ಪಟ್ಟ ಪಿಂಚಣಿ ಹಾಗು ಕುಟುಂಬ ಪಿಂಚಣಿದಾರರ ಬಾಕಿ<br>(ನಮೂನೆ 6 ರಲ್ಲಿ ವಿವರಗಳನ್ನು ಒದಗಿಸಬೇಕು, ಅಧಿಕೃತ ಜ್ಞಾಪನ ಪತ್ರ ಹಾಗು ಆಂತರಿಕ ಲೆಕ್ಕಾಧಿಕಾರಿಯವರಿಂದ ಪರಿಶೀಲಿಸಲ್ಪಟ್ಟ ಬಿಲ್ಲುಗಳ ಪ್ರತಿಗಳನ್ನು ಲಗತ್ತಿಸಬೇಕು) | |
| 6 | ಇತರೆ (ವಿವರಗಳನ್ನು ದೃಢೀಕರಿಸಿ ಲಗತ್ತಿಸಬೇಕು) | |
| 7 | **ಒಟ್ಟು:** | |
| 8 | ಕಳೆಯಿರಿ: (ಅಂತಿಮ ಶಿಲ್ಕು – ನಮೂನೆ 2 ರ ಕ್ರಮ ಸಂಖ್ಯೆ 6 ರಲ್ಲಿನ ಮೊತ್ತ) | |
| 9 | ಈ ತಿಂಗಳಿನಲ್ಲಿ ಪಿಂಚಣಿ ಮತ್ತು ಕುಟುಂಬ ಪಿಂಚಣಿಯ ಪಾವತಿಗಾಗಿ ಬೇಕಾದ ನಿವ್ವಳ ಮೊತ್ತ (7-8)<br>(ಪುಟ 1 ರಲ್ಲಿನ ಕಲಂ 7 ರಲ್ಲಿಯ ಮೊತ್ತಕ್ಕೆ ಹೊಂದಾಣಿಕೆಯಾಗಿರಬೇಕು) | |

ಸಹಾಯಕ ಲೆಕ್ಕಾಧಿಕಾರಿ                                        ಲೆಕ್ಕಾಧಿಕಾರಿ

ಲೆಕ್ಕಾಧಿಕಾರಿ (ಆಂತರಿಕ ಪರಿಶೋಧನೆ)

# ನಮೂನೆ 2

ಭಾಗ: ತಿಂಗಳು:

| | ಪಿಂಚಣಿದಾರರ ವಿವರಗಳು | | ಮೊತ್ತ | ಕುಟುಂಬ ಪಿಂಚಣಿದಾರರ ವಿವರಗಳು | ಮೊತ್ತ | ಒಟ್ಟು ಮೊತ್ತ (4+6) |
|---|---|---|---|---|---|---|
| 1 | 2 | 3 | 4 | 5 | 6 | 7 |
| | ಕ್ರಮ ಸಂಖ್ಯೆ | ಪಿಂಚಣಿದಾರರ ಸಂಖ್ಯೆ | | ಕುಟುಂಬ ಪಿಂಚಣಿದಾರರ ಸಂಖ್ಯೆ | | |
| ದಿನಾಂಕ 31-05-2002 ಕ್ಕಿಂತ ಮೊದಲಿನ ಅವಧಿಯದ್ದು | ಅ(1) | ಮೂಲ ಪಿಂಚಣಿ (Before commutation) (ಪರಿವರ್ತಿತ ಮೊತ್ತಕ್ಕಿಂತ ಮೊದಲಿನದು) | | ಮೂಲ ಕುಟುಂಬ ಪಿಂಚಣಿ | | |
| | ಅ(2) | ತುಟ್ಟಿಭತ್ಯೆ | | ತುಟ್ಟಿಭತ್ಯೆ | | |
| | ಅ(3) | **ಒಟ್ಟು** | | **ಒಟ್ಟು** | | |
| | ಅ(4) | ಕಳೆಯಿರಿ:1. ಪರಿವರ್ತಿತ ಮೊತ್ತ (Commutation) | | ಕಳೆಯಿರಿ: | | |
| | | 2. ಇತರೆ | | 1. ಇತರೆ | | |
| | | **ಒಟ್ಟು** | | **ಒಟ್ಟು** | | |
| | ಅ(5) | ನಿವ್ವಳ ಪಾವತಿ(3-4) | | ನಿವ್ವಳ ಪಾವತಿ(3-4) | | |
| ದಿನಾಂಕ 1-06-2002 ರ ನಂತರದ ಅವಧಿಯದ್ದು | ಅ(6) | ಮೂಲ ಪಿಂಚಣಿ (Before commutation) (ಪರಿವರ್ತಿತ ಮೊತ್ತಕ್ಕಿಂತ ಮೊದಲಿನದು) | | ಮೂಲ ಕುಟುಂಬ ಪಿಂಚಣಿ | | |
| | ಅ(7) | ತುಟ್ಟಿಭತ್ಯೆ | | ತುಟ್ಟಿಭತ್ಯೆ | | |
| | ಅ(8) | ಒಟ್ಟು | | ಒಟ್ಟು | | |
| | ಅ(9) | ಕಳೆಯಿರಿ: 1. ಪರಿವರ್ತಿತ ಮೊತ್ತ | | ಕಳೆಯಿರಿ: | | |
| | | 2. ಇತರೆ | | 1. ಇತರೆ | | |
| | | **ಒಟ್ಟು** | | **ಒಟ್ಟು** | | |
| | ಅ(10) | ನಿವ್ವಳ ಪಾವತಿ(8-9) | | ನಿವ್ವಳ ಪಾವತಿ(8-9) | | |
| | | **ಪಾವತಿಸಬೇಕಾದ ಒಟ್ಟು ಮೊತ್ತ(ಅ 5+ಅ 10)** | | **ಪಾವತಿಸಬೇಕಾದ ಒಟ್ಟು ಮೊತ್ತ(ಅ 5+ಅ 10)** | | |

## ದೃಢೀಕರಣಗಳು

1. ____________________ತಿಂಗಳಿನಲ್ಲಿ ಪಾವತಿ ಮಾಡಬೇಕಾದ ಪಿಂಚಣಿ , ಕುಟುಂಬ ಪಿಂಚಣಿ ಮತ್ತು ತುಟ್ಟಿಭತ್ಯೆಯ ಮೊತ್ತವು ಬಿಲ್ಲುಗಳ ಅನ್ವಯ ರೂ.____________________ಎಂದು ದೃಢೀಕರಿಸಲಾಗಿದೆ.

2. ____________________ ತಿಂಗಳಿನ ಕ್ಲೇಮನ್ನು ಶೆಡ್ಯೂಲ್ ನಲ್ಲಿ ಪಿ.ಪಿ.ಒ. ಆದೇಶದಲ್ಲಿ ಅನುಮೋದಿತ ತುಟ್ಟಿಭತ್ಯೆಯಂತೆ ಡಿಮ್ಯಾಂಡ್ ಮಾಡಿದ ನಂತರವೇ ಬಿಲ್ಲನ್ನು ತಯಾರಿಸಿದೆ ಮತ್ತು ಪರಿಶೀಲಿಸಲಾಗಿದೆ.

3. ಕ್ಲೇಮು ಮಾಡಿರುವ ಬಿಲ್ಲಿನ ಮೊತ್ತವು ಜೀವಂತವಾಗಿರುವ ಪಿಂಚಣಿದಾರರ ಮತ್ತು ಕುಟುಂಬ ಪಿಂಚಣಿದಾರರ ಕ್ಲೇಮನ್ನು ಮಾತ್ರ ಒಳಗೊಂಡಿರುತ್ತದೆ. ಕಾಲ ಕಾಲಕ್ಕೆ ನೀಡಬೇಕಾದ ಜೀವಂತ ದೃಢೀಕರಣ ಪತ್ರವನ್ನು ನೀಡಿದವರ ತುಟ್ಟಿಭತ್ಯೆ ಬಾಕಿಯ ಕ್ಲೇಮನ್ನು ಮಾತ್ರ ಈ ಬಿಲ್ಲಿನಲ್ಲಿ ಸೇರಿಸಲಾಗಿದೆಯೆಂದು ದೃಢೀಕರಿಸಲಾಗಿದೆ.

4. ____________________ ತಿಂಗಳಿನಲ್ಲಿ ರೂ.____________________ ನ್ನು ಪಿಂಚಣಿ ಮತ್ತು ಕುಟುಂಬ ಪಿಂಚಣಿ ಪಾವತಿಗಾಗಿ ಟ್ರಸ್ಟ್ ನಿಂದ ಪಡೆದಿದ್ದು, ಇದನ್ನು ಸಂಪೂರ್ಣವಾಗಿ ಪಿಂಚಣಿ ಮತ್ತು ಕುಟುಂಬ ಪಿಂಚಣಿ ಪಾವತಿಗಾಗಿ ಉಪಯೋಗಿಸಿದೆ. ಪಾವತಿ ಮಾಡಿದ ಮೊತ್ತವನ್ನು ನಗದು ಪುಸ್ತಕದಲ್ಲಿರುವಂತೆ ಪರಿಶೀಲಿಸಿದೆ ಹಾಗು ಬ್ಯಾಂಕ್ ಸಮನ್ವಯ ತಃಖ್ತೆಯೊಂದಿಗೆ ತಾಳೆ ಮಾಡಿದೆ.

5. ____________________ತಿಂಗಳಿನಲ್ಲಿ ಪಿಂಚಣಿ ಹಾಗು ಕುಟುಂಬ ಪಿಂಚಣಿ ಪಾವತಿಗಾಗಿ ಕೋರಿರುವ ಮೊತ್ತ ರೂ.______________________ ಕ್ರಮ ಬದ್ಧವಾಗಿರುತ್ತದೆ. ನಿಧಿಯನ್ನು ________________________________________ (ಬ್ಯಾಂಕಿನ ಹೆಸರು) ನ ______________________________ (ಶಾಖೆಯ ಹೆಸರು) ಯ ಉಳಿತಾಯ ಖಾತೆ ಸಂಖ್ಯೆ_____________________________________ ಗೆ ವರ್ಗಾಯಿಸಲು ಕೋರಲಾಗಿದೆ.

6. ದಿನಾಂಕ________________________ ರಂದು ನಗದು ಪುಸ್ತಕದಲ್ಲಿರುವಂತೆ ಅಂತಿಮ ಶಿಲ್ಕು ರೂ.______________________ ಇರುತ್ತದೆ. ಸಂಕೀರ್ಣ ಮೊಬಲಗು ರೂ.____________________ ಇರುತ್ತದೆ.

ಸಹಾಯಕ ಲೆಕ್ಕಾಧಿಕಾರಿ

ಲೆಕ್ಕಾಧಿಕಾರಿ

ಲೆಕ್ಕಾಧಿಕಾರಿ (ಆಂತರಿಕ ಪರಿಶೋಧನೆ)